**ಇದೋ ತಂದಿದೆ ಈ ದೀನನ ಗಾನ**
**ಕೃಪಾಕಣದ ಅಭಿಲಾಷಿಯಾಗಿರುವೆ ನಾನು**

– ಗಿರೀಶ್‌ಚಂದ್ರ ಘೋಷ್

**ಕರ್ಮ, ಭಕ್ತಿ, ಜ್ಞಾನ ಎಂಬ ತ್ರಿಶೂಲವನ್ನು ಧರಿಸಿ ಜೀವಿಗಳ ಮೋಹವನ್ನು ಕಿತ್ತೆಸೆಯಲು ಬಂದ ಶಿವನೇ ಇವನು.**

–ವಿವೇಕಾನಂದ ಸ್ತೋತ್ರದಿಂದ

ಬ್ರಹ್ಮಸಮಾಜದ ಪ್ರಸಿದ್ಧ ಮುಖಂಡ ಆ ಕಾಲದ ಮಹಾ ವಾಗ್ಮಿವರ್ಯ ಕೇಶವಚಂದ್ರ ಸೇನ ಇಂಗ್ಲೆಂಡಿಗೆ ಹೋಗಿ ವಿಕ್ಟೋರಿಯಾ ಮಹಾರಾಣಿಯಿಂದ ಸನ್ಮಾನಿತನಾಗಿ ಬಂದವನು. ಒಂದು ದಿನ ಅವನು ಭಗವಾನ್ ಶ್ರೀರಾಮಕೃಷ್ಣರನ್ನು ನೋಡಲು ದಕ್ಷಿಣೇಶ್ವರಕ್ಕೆ ಬಂದಿದ್ದನು. ಸಂಭಾಷಣೆ ನಡೆಯುತ್ತಿತ್ತು. ಸಮೀಪದಲ್ಲೇ ಕಾಲೇಜು ವಿದ್ಯಾರ್ಥಿಯಾಗಿದ್ದ ನರೇಂದ್ರನೂ ಅವರಿಬ್ಬರ ಮಾತುಕತೆಗಳನ್ನು ಕೇಳುತ್ತಾ ಕುಳಿತಿದ್ದ. ಇದ್ದಕ್ಕಿದ್ದಂತೆ ಶ್ರೀರಾಮಕೃಷ್ಣರು ತಮ್ಮ ಶಿಷ್ಯರಲ್ಲಿ ನರೇಂದ್ರನನ್ನು "ಸಹಸ್ರದಲಪದ್ಮ" ಎಂದು ಬಣ್ಣಿಸಿದರು. ಇನ್ನೊಂದು ದಿನ ನರೇಂದ್ರನನ್ನು ಪ್ರಶಂಸಿಸುತ್ತ ಪ್ರಖ್ಯಾತನಾದ ಕೇಶವಚಂದ್ರನಲ್ಲಿ ಒಂದು ದೈವೀಶಕ್ತಿ ಇದ್ದರೆ, ನರೇಂದ್ರನಲ್ಲಿ ಜಗತ್ತನ್ನು ಬೆರಗುಗೊಳಿಸುವ ಹದಿನೆಂಟು ಅಂಥ ದೈವೀಶಕ್ತಿಗಳಿವೆ ಎಂದರು.

"ಜಗತ್‌ಪ್ರಸಿದ್ಧನಾದ ಕೇಶವಚಂದ್ರ ಸೇನನೆಲ್ಲಿ? ಕಾಲೇಜು ವಿದ್ಯಾರ್ಥಿಯಾದ ತಾನೆಲ್ಲಿ ?" ಎಂದು ಸಂಕೋಚದಿಂದ ನರೇಂದ್ರ "ನೀವೇನು ಹೇಳುತ್ತಿದ್ದೀರಿ? ಅರ್ಥವಿದೆಯೆ ಈ ಮಾತಿಗೆ" ಎಂದು ವಿರೋಧಿಸಿದ. ಮುಗುಳ್ನಗುತ್ತ ಶ್ರೀರಾಮಕೃಷ್ಣರು, "ನಾನೇನು ಮಾಡಲಿ? ಜಗನ್ಮಾತೆ ನನಗೆ ತಿಳಿಸಿದುದನ್ನು ಹೇಳಿದೆ" ಎಂದರು.

* * * * * * *

ಉಪನಿಷತ್ತಿನಲ್ಲಿ ಉಕ್ತವಾದ, ಸನಾತನ ಧರ್ಮವೆಂದು ಕರೆಯಲ್ಪಡುವ 'ಜೀವ', 'ಜಗತ್ತು', ಜಗನ್ನಿಯಾಮಕ – ಇವುಗಳ ನೈಜ ಸ್ವರೂಪದ ಅರಿವಿನ ಹಿನ್ನೆಲೆಯಿಂದ ಋಷಿಪ್ರಣೀತವಾದ, ಮನುಷ್ಯ ಜೀವನದ ಅರ್ಥವನ್ನೂ ಉದ್ದೇಶವನ್ನೂ ಕರ್ತವ್ಯ ವನ್ನೂ ತಿಳಿಸಿಕೊಡುವ ಮಾರ್ಗದರ್ಶಕ ಸೂತ್ರಗಳೇ, ನಿಯಮ ಗಳೇ ಧರ್ಮ. ಇವುಗಳ ಅನುಸರಣೆಯಿಂದ ವ್ಯಕ್ತಿಯ ಸರ್ವತೋ ಮುಖ ಅಭ್ಯುದಯ ಹಾಗೂ ಸಮಾಜದ ಸುಸ್ಥಿತಿ ಮತ್ತು ಕಲ್ಯಾಣ ಸಾಧ್ಯವಾಗುವುದು. 'ಯಾವುದರಿಂದ ಅಭ್ಯುದಯ ನಿಃಶ್ರೇಯಸ ಸಿದ್ಧಿಯೋ ಅದೇ ಧರ್ಮ' ಎಂಬ ಪ್ರಖ್ಯಾತವಾದ ಧರ್ಮ ಶಬ್ದದ ನಿರ್ವಚನವಿದೆ. ಅರ್ಥ ಕಾಮಗಳೇ ಮುಖ್ಯವಲ್ಲ. ಏಕೆಂದರೆ ಮನುಷ್ಯನು ಬರಿಯ ದೇಹವೇ ಅಲ್ಲ. ಅವನು ಜೀವಾತ್ಮ. ದೇಹ ಇಂದ್ರಿಯ ಮನಸ್ಸು – ಇವುಗಳನ್ನು ಬಳಸಿ ಬಾಳುವೆಯನ್ನು ಅನುಭವಿಸುತ್ತಿರುವ ಒಂದು ತತ್ತ್ವವಿದೆ. 'ನಾನು' 'ನಾನು' ಎಂದುಕೊಳ್ಳುತ್ತದೆಯಲ್ಲ – ಅದೇ ಆ ತತ್ತ್ವ. 'ಕರ್ತೃತ್ವ' 'ಭೋಕ್ತೃತ್ವ' 'ಅಭಿಮಾನಿ' ಎಂದರೆ "ಹೀಗೆ ಹೀಗೆ ಮಾಡುವೆ. ತತ್ಫಲವಾಗಿ ಸುಖವನ್ನು ಅನುಭವಿಸುವೆ" ಎನ್ನುವ 'ನಾನು' 'ನಾನು' ಎಂದು ಕೊಳ್ಳುವ ಜೀವಾತ್ಮ. ತಾನು ಆತ್ಮ, ತನ್ನ ಎದುರಿಗೆ ಇತರ ಆತ್ಮಗಳಿವೆ ಎಂಬುದನ್ನು ತಿಳಿದು ನಾವು ನಡೆಯಬೇಕು. 'ನಾನು' ಎನ್ನುವುದು ದೇಹಕ್ಕಿಂತ ಹೆಚ್ಚಾಗಿ ಆತ್ಮವಾದ ಕಾರಣ ದೇಹದ ಸುಖವನ್ನು ಮಾತ್ರ ಎಣಿಸಬಾರದು. ತನ್ನ ಎಲ್ಲ ಸಂಪತ್ತನ್ನೂ ಆತ್ಮದ ಕ್ಷೇಮಕ್ಕೆ ವಿರೋಧವಾಗದಂತೆ ಉಪಯೋಗಿಸಬೇಕು. ಎಂದರೆ ಇಂದ್ರಿಯಸುಖದ ದಾಸನಾಗಬಾರದು. ಅವುಗಳು ಎಳೆದಲ್ಲಿಗೆ ಹೋಗಬಾರದು. ಇಂದ್ರಿಯನಿಗ್ರಹ, ಚಿತ್ತಶುದ್ಧಿ ತನ್ಮೂಲಕ ಆತ್ಮಜ್ಞಾನ, ತತ್ಫಲವಾಗಿ ಸರ್ವಬಂಧ ನಿವೃತ್ತಿ, ಶಾಶ್ವತ ಆನಂದ ಪ್ರಾಪ್ತಿ. ಇವು ಧರ್ಮಗ್ರಂಥಗಳೂ ಮಹಾತ್ಮರೂ ಅನುಭವಿಗಳೂ ಸಾರುವ ಮುಖ್ಯ ಬೋಧನೆಗಳು.

ಅರ್ಥಕಾಮಗಳೇ ಸರ್ವಸ್ವವೆಂದು ನೀತಿ ನಿಯಮಗಳನ್ನು ಬದಿಗಿರಿಸಿ ನಡೆದುಕೊಂಡರೆ ವ್ಯಕ್ತಿಯ ಬದುಕು ದುರ್ಬಲವಾಗಿ, ಅವನ ಪಾಲಿಗೆ ಅತ್ಯಂತ ಶ್ರೇಷ್ಠವೂ, ಶಕ್ತಿಶಾಲಿಯೂ, ದಿವ್ಯವೂ ಆದ ಇನ್ನೊಂದು ಆಧ್ಯಾತ್ಮಿಕ ಆಯಾಮ ದೊರೆಯದೆ ಹೋಗುವುದು. ಅದನ್ನೇ 'ಧರ್ಮಗ್ಲಾನಿ' ಎನ್ನುವುದು. ಸಂತಮಹಾತ್ಮರೂ, ಆಧ್ಯಾತ್ಮಿಕವೀರರೂ ಈ ಗ್ಲಾನಿಯನ್ನು ಹೋಗಲಾಡಿಸಿ, ತಮ್ಮ ಆದರ್ಶ ಜೀವನ ಮತ್ತು ಶಕ್ತಿಯ ಸಂದೇಶಗಳಿಂದ ದೇವರು ಧರ್ಮಗಳಲ್ಲಿ ಶ್ರದ್ಧೆಯನ್ನು ಪುನಃ ಪ್ರತಿಷ್ಠಾಪನೆ ಮಾಡುತ್ತಾರೆ. ಅದೇ ಧರ್ಮಸಂಸ್ಥಾಪನೆ. ಭಗವಾನ್ ಶ್ರೀರಾಮಕೃಷ್ಣರು ಜಗತ್ತಿನ ಪರಮ ಸತ್ಯಾನ್ವೇಷಿಗಳು. ಅವರು ಜನರ ಹೃದಯದಲ್ಲಿದ್ದ ಸಂಶಯ ರಾಕ್ಷಸನನ್ನು ಓಡಿಸಿ, ಭಗವಂತನ ಅಸ್ತಿತ್ವದಲ್ಲಿ ಶ್ರದ್ಧೆಯನ್ನು ಪುನಃ ಪ್ರತಿಷ್ಠಾಪನೆ ಮಾಡಿದರು. ಅವರ ಪರಮಾದ್ಭುತ ಜೀವನ ತಪಸ್ಸು ಸಂದೇಶಗಳನ್ನು ಮನನ ಮಾಡಿದಾಗ, ಅವರ ತ್ಯಾಗ, ತಪಸ್ಸು ವಿವೇಕ, ವೈರಾಗ್ಯ, ಆಧ್ಯಾತ್ಮಿಕ ಅನುಭೂತಿ – ಇವು ಜೀವನವನ್ನು ಸರಿಯಾಗಿ ನಡೆಸಲು ನಿರಂತರ ಸ್ಫೂರ್ತಿ ನೀಡಬಲ್ಲವು. ಭಗವತ್ಸಾಕ್ಷಾತ್ಕಾರದ ಸಾಹಸದ ಸಾಧನೆಯಲ್ಲಿ ಉತ್ಸಾಹ ನೂರ್ಮಡಿಯಾಗುವುದು. ಇದೇ ಧರ್ಮಸ್ಥಾಪನೆಯ ವಿಧಾನ.

ಸ್ವಾಮಿ ವಿವೇಕಾನಂದರ ಮತ್ತು ಅವರ ಗುರುಗಳಾದ ಶ್ರೀರಾಮಕೃಷ್ಣರ ಜೀವನ ಸಂದೇಶಗಳನ್ನು ಶ್ರದ್ಧೆಯಿಂದ ಆಮೂಲಾಗ್ರವಾಗಿ ಅಧ್ಯಯನ ಮಾಡಿದರೆ ಮಾತ್ರ, ಅವರ ಮಹಿಮೆ ಮಾಹಾತ್ಮೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಹುದು. **"ನಿನ್ನ ಮಹಿಮೆಯ ಸವಿವ ಸೆಲೆಯೇ ಮುಕ್ತಿ ವರಯೋಗಿ"** ಎಂದು ಶ್ರೀ ಕುವೆಂಪು ಒಂದು ಕವನದಲ್ಲಿ ಸ್ವಾಮಿ ವಿವೇಕಾನಂದರನ್ನು ಕುರಿತು ಹೇಳುತ್ತಾರೆ.

ಹೇ ಯೋಗಿ ! ನೀನು ಭಾರತಕ್ಕೆ, ಸನಾತನ ಧರ್ಮಕ್ಕೆ ಅದೆಂಥಹ ಉಪಕಾರ ಮಾಡಿದೆ ! ಜಗತ್ತಿನ ಉಳಿವಿಗೆ ಅದೆಂಥ ಅಸಾಧಾರಣ ಸೇವೆಯನ್ನು ಮಾಡಿದೆ! ಅದನ್ನು ಸರಿಯಾಗಿ ಚಿಂತನೆ ಮಾಡಿದರೆ ಮನುಷ್ಯನು ಅಧ್ಯಾತ್ಮದ ಪಥದಲ್ಲಿ ನಡೆದು ದಿವ್ಯಾನುಭೂತಿಯನ್ನು ಪಡೆಯಬಲ್ಲ ! ಬಂಧನದಿಂದ ಬಿಡಿಸಿಕೊಂಡು ಮುಕ್ತನಾಗಬಲ್ಲ !

* * * * * * *

ದೀರ್ಘಕಾಲದ ದಾಸ್ಯದಿಂದ, ಪರಾನುಕರಣೆಯ ಪ್ರವೃತ್ತಿ ಯಿಂದ, ವಿದೇಶಿಯರ, ವಿಧರ್ಮಿಗಳ ನಿರಂತರ ದೂಷಣೆ, ದೋಷಾರೋಪಣೆಗಳಿಂದ, ತಮ್ಮ ಧರ್ಮ ಸಂಸ್ಕೃತಿಯ ಸತ್ತ್ವ ಶಕ್ತಿಗಳ ಅರಿವಿನ ಅಭಾವದಿಂದ, ನೈಚ್ಯಾನುಸಂಧಿಯಿಂದ

ನರಳುತ್ತಾ. ತಾವು ಅಪ್ರಯೋಜಕರು, ದುರ್ಬಲರು ಎಂಬಂಥ ಕೀಳರಿಮೆಯಿಂದ, ಕರಟಿ ಗುಲಾಮಗಿರಿಗೆ ಸಹಜವಾದ ಅವಿಚಾರಿತ ಪರಾನುಕರಣೆಯೇ ಪ್ರಗತಿಯ ದಾರಿ ಎಂದು ಕೊಂಡಾಗ, ಜಗತ್ತಿನಾದ್ಯಂತ ಜಡವಾದ, ಅದಕ್ಕೆ ಪೋಷಕವಾದ ವೈಜ್ಞಾನಿಕ ವಿಚಾರಗಳಿಂದ ಇಹಲೋಕವೇ ಸರ್ವಸ್ವ, ಎಂದರೆ ಅರ್ಥಕಾಮಗಳೇ ಮುಖ್ಯ ಧರ್ಮ, ಆಧ್ಯಾತ್ಮಿಕ ವಿಚಾರ ಹೆಚ್ಚು ಕಡಿಮೆ ಮೂಢನಂಬಿಕೆಗಳ ಕಂತೆ ಪುರಾಣಗಳು ಎಂಬ ಅಭಿಪ್ರಾಯ ಪ್ರಬಲವಾದಾಗ, ಮತ ಪಂಥಗಳು ಪ್ರೀತಿ ಸೌಹಾರ್ದ ವನ್ನು ಉಂಟುಮಾಡುವ ಕಾರ್ಯಕ್ಕೆ ಬದಲು ದ್ವೇಷ ಅಸೂಯೆ, ಹಿಂಸೆಗೆ ಪ್ರೇರಕವಾಗುವ ಪರಿಸ್ಥಿತಿ ಬಂದಾಗ, ಇತಿಹಾಸದ ಒಂದು ಸಂಕಟಮಯ ಸಂಕ್ರಾಂತಿ ಕಾಲದಲ್ಲಿ, ಇಡೀ ಜಗತ್ತಿಗೆ ತಿರುವು ನೀಡಬಲ್ಲ ನಾಸ್ತಿಕ್ಯದ ನರಕಾಸುರನನ್ನು ಹಿಮ್ಮೆಟ್ಟಿಸಬಲ್ಲ, ಪರಮಾತ್ಮನ ಅಸ್ತಿತ್ವದಲ್ಲಿ ರಸಪೂರ್ಣಾಸ್ತಿಕ ಬುದ್ಧಿಯನ್ನೂ, ಇಂದ್ರಿಯ ಸಂಯಮ ವಿಷಯದಲ್ಲಿ ಆಸಕ್ತಿಯನ್ನೂ. ಜಗತ್ತಿನ ಉಳಿವಿಗೆ ಅತ್ಯಂತ ಅವಶ್ಯಕವಾದ ಶತಮತಗತ ಧರ್ಮಸಮನ್ವಯದ ಮಹಾಸಂದೇಶವನ್ನೂ ನೀಡಲು ಆಗಮಿಸಿದ ದಿವ್ಯಾತ್ಮರೇ ಭಗವಾನ್ ಶ್ರೀರಾಮಕೃಷ್ಣರು ಮತ್ತು ಅವರ ಧರ್ಮಸ್ಥಾಪನೆಯ ವ್ರತಕ್ಕೆ ಸಹಾಯಕಾರಿಯಾಗಿದ್ದ ಸ್ವಾಮಿ ವಿವೇಕಾನಂದರು.

* * * * * * *

## ಐದು ಮಾಂತ್ರಿಕ ಶಬ್ದಗಳು ಮಾಡಿದ ಮೋಡಿ

ಐದು ಸಹಸ್ರ ಸಭಿಕರ ಪ್ರಚಂಡ ಕರತಾಡನಪೂರ್ವಕ ಹರ್ಷೋದ್ಗಾರದ ಪ್ರತಿಕ್ರಿಯೆ! ಸ್ವಾಮಿ ವಿವೇಕಾನಂದರು ಸರ್ವ ಧರ್ಮ ಸಮ್ಮೇಳನದ ಮಹಾಸಭೆಯನ್ನು ಉದ್ದೇಶಿಸಿ ಸ್ವಾಗತಕ್ಕೆ ಉತ್ತರವಾಗಿ ನೀಡಿದ ಮೊದಲ ಭಾಷಣದ ಆರಂಭದಲ್ಲಿ, "ಅಮೆರಿಕಾ ದೇಶದ ಸೋದರ ಸೋದರಿಯರೇ" ಎಂದು ಸಂಬೋಧಿ ಸಿದರು. ಇಂಗ್ಲಿಷಿನಲ್ಲಿ ಸ್ವಾಮೀಜಿ ನುಡಿದ ಮಾತುಗಳೆಂದರೆ, 'Sisters and Brothers of America!' ಎಂದು. ಈ ಐದು ಶಬ್ದಗಳು ಸ್ವಾಮೀಜಿಯವರ ಮುಖಕಮಲದಿಂದ ಹೊರ ಹೊಮ್ಮುತ್ತಲೇ, ತುಂಬಿದ ಸಭೆಯಿಂದ ಪ್ರಚಂಡ ಚಪ್ಪಾಳೆಗಳ ಸುರಿಮಳೆ ಐದು ನಿಮಿಷಗಳಾದರೂ ನಿಲ್ಲದೇ ಏಕಪ್ರಕಾರವಾಗಿ ಹರಿಯಿತು. ಸ್ವಾಮೀಜಿ ಮೂಕವಿಸ್ಮಿತರಾಗಿ ನಿಂತಿದ್ದರು. ಸಭೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವವರು ನಾನಾ ಕಡೆಗಳಲ್ಲಿ ನಿಂತು, " ದಯವಿಟ್ಟು ಚಪ್ಪಾಳೆ ನಿಲ್ಲಿಸಿ, ಶಾಂತರಾಗಿ" ಎಂದು ಬೇಡಿಕೊಂಡರು. ಆಗ ಮೆಲ್ಲನೆ ಚಪ್ಪಾಳೆ ಶಾಂತವಾಯಿತು. ಈ ಮೊದಲ ಭಾಷಣದ ಅವಧಿ ನಾಲ್ಕೈದು ನಿಮಿಷಗಳು ಮಾತ್ರ. ಅದು ವಿಶ್ವವಿಖ್ಯಾತವಾಯಿತು. ಅಮೆರಿಕದ ಎಲ್ಲ ಪತ್ರಿಕೆಗಳಲ್ಲಿ ಹೊರಹೊಮ್ಮಿ ಪ್ರಚಂಡ ಪ್ರಶಂಸೆಗೆ ಪಾತ್ರವಾಯಿತು.

೧೮೯೨ ರಲ್ಲಿ ಹಿಂದೂ ಧರ್ಮದ ಬಗ್ಗೆ ಚೆನ್ನೈನ "ದಿ ಹಿಂದೂ" ಪತ್ರಿಕೆ, 'ಅದು ಸತ್ತು ಹೋಗಿದೆ. ಅದರ ಕಾಲಾವಧಿ ಮುಗಿದಿದೆ' ಎಂದು ಬರೆಯಿತು. ಅದೇ ಪತ್ರಿಕೆ ಒಂದು ವರ್ಷದ ನಂತರ, "ಈಗಿನ ಕಾಲಖಂಡವನ್ನು ಹಿಂದುಗಳ ಚರಿತ್ರೆಯಲ್ಲಿ ಪುನರುತ್ಥಾನದ ಕಾಲ ಎಂದು ಹೇಳಬಹುದು" ಎಂದೂ ಬರೆಯಿತು. ಅದಕ್ಕಾರು ಕಾರಣ? ಸ್ವಾಮಿ ವಿವೇಕಾನಂದರಲ್ಲದೆ ಮತ್ತಾರು?

ಲೋಕಮಾನ್ಯ ತಿಲಕರಂತೂ ಸ್ವಾಮಿ ವಿವೇಕಾನಂದರನ್ನು "ಸನಾತನ ಧರ್ಮಕ್ಕೆ ಮರುಜನ್ಮ ನೀಡಿದ ಮಹಾತ್ಮರು ಆದಿ ಶಂಕರರಂತೆ" ಎಂದಿದ್ದಾರೆ.

ದೇಶಭಕ್ತ ಜಗತ್ಪ್ರಸಿದ್ಧ ವಾಗ್ಮಿವರ್ಯ ಬಿಪಿನ್ ಚಂದ್ರಪಾಲರ ವಾಕ್ಯಗಳನ್ನು ನೋಡಿ: "ಭಾರತದ ಆಧುನಿಕ ರಾಷ್ಟ್ರೀಯತೆಯ ಅತ್ಯಂತ ಶ್ರೇಷ್ಠ ಉದ್ದಾಮ ದಾರ್ಶನಿಕರೂ ಪ್ರಚಾರಕರೂ ಸ್ವಾಮಿ ವಿವೇಕಾನಂದರಾಗಿದ್ದರೆಂದು ನಿಸ್ಸಂದೇಹವಾಗಿ ಹೇಳಬಹುದು. ಸ್ವಾಮೀಜಿ ಭಾರತ ರಾಷ್ಟ್ರ ಹಾಗೂ ಸಂಸ್ಕೃತಿಗೆ ನಾಡಿನಲ್ಲಿ ಜ್ವಲಂತ ಅಭಿಮಾನದ ಭಾವನೆಗಳನ್ನು ಮೂಡಿಸಿದರು. ಅದು ಅನಂತರ ರಾಷ್ಟ್ರೀಯ ಚಳವಳಿಯ ಸಂದರ್ಭದಲ್ಲಿ ಅತ್ಯಂತ ತೀವ್ರವಾದ ದೇಶಭಕ್ತಿಗೆ ಪ್ರೇರಕವಾಯಿತು." ಸ್ವತಂತ್ರ ಭಾರತದ ಪ್ರಥಮ ಗವರ್ನರ್ ಜನರಲ್ ಆಗಿದ್ದ, ೧೮೯೭ರಲ್ಲಿ ಅಮೆರಿಕಾದಿಂದ ಭಾರತಕ್ಕೆ ಸ್ವಾಮೀಜಿ ಹಿಂದಿರುಗಿದ್ದಾಗ ಅವರನ್ನು ಕಂಡಿದ್ದ, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಜೈಲುವಾಸ ಮಾಡಿದ್ದ ಚಕ್ರವರ್ತಿ ರಾಜಗೋಪಾಲಾಚಾರಿ ಅವರು ಸ್ವಾಮಿ ವಿವೇಕಾನಂದ ರನ್ನು ಕುರಿತು ಒಂದು ಸಾರಗರ್ಭಿತ ಸತ್ಯವನ್ನು ಹೇಳಿದ್ದಾರೆ, "ಸ್ವಾಮಿ ವಿವೇಕಾನಂದರು ಹಿಂದೂ ಧರ್ಮವನ್ನು ರಕ್ಷಿಸಿದರು. ಭಾರತವನ್ನು ರಕ್ಷಿಸಿದರು; ಅವರಿಲ್ಲದಿದ್ದರೆ, ನಾವು ನಮ್ಮ ಧರ್ಮ ವನ್ನು ಕಳೆದುಕೊಳ್ಳುತ್ತಿದ್ದೆವು. ಮಾತ್ರವಲ್ಲ, ಸ್ವಾತಂತ್ರ್ಯವನ್ನೂ ಪಡೆಯುತ್ತಿರಲಿಲ್ಲ."

* * * * * * *

## ಜಯ ರಾಧೇ ಪ್ರೇಮಮಯಿ!

ಶ್ರೀರಾಮಕೃಷ್ಣರು ತಮ್ಮ ದೇಹತ್ಯಾಗಕ್ಕೆ ಮೊದಲು ಒಂದು ಕಾಗದದ ಮೇಲೆ ಹೀಗೆಂದು ಬರೆದರು: "ಜಯ ರಾಧೇ ಪ್ರೇಮಮಯಿ! ನರೇಂದ್ರನು ಈ ದೇಶದಲ್ಲಾಗಲಿ ಹೊರ ದೇಶದಲ್ಲಾಗಲೀ ತನ್ನ ಸಿಂಹಗರ್ಜನೆಯಿಂದ ಧರ್ಮಬೋಧನೆ ಮಾಡುವನು, ಮಾಡಿಯೇ ಮಾಡುವನು." ನರೇಂದ್ರನು ಅದಕ್ಕೆ ಸಮ್ಮತಿಸದಾಗ, ಶ್ರೀರಾಮಕೃಷ್ಣರು, "ಮಾಡಲೇಬೇಕಾಗುತ್ತದೆ. ಮಾಡಿಯೇ ಮಾಡುತ್ತಿ" ಎಂದಿದ್ದರು.

* * * * * * *

## ಸರ್ವಧರ್ಮ ಸಮ್ಮೇಳನ ಇದಕ್ಕಾಗಿ

ಇನ್ನೊಂದು ಕುತೂಹಲಕಾರಿ ಘಟನೆ. ಸ್ವಾಮೀಜಿ ಸರ್ವಧರ್ಮ ಸಮ್ಮೇಳನಕ್ಕೆ ಹೊರಡುವ ಮೊದಲು ಮುಂಬಯಿಯಲ್ಲಿ ಸ್ವಾಮಿ ತುರೀಯಾನಂದರ ಹತ್ತಿರ ವಿವಿಧ ವಿಷಯಗಳನ್ನು ಮಾತನಾಡಿ, ಒಮ್ಮೆ ಹೀಗೆಂದರಂತೆ: "ಅಲ್ಲಿ, ಅಮೆರಿಕಾದಲ್ಲಿ ಸರ್ವಧರ್ಮ ಸಮ್ಮೇಳನ ಸಿದ್ಧತೆ ನಡೆಯುತ್ತಿದೆಯಲ್ಲ, ಅದು (ತಮ್ಮನ್ನು ತೋರಿಸಿಕೊಂಡು) ಇದಕ್ಕಾಗಿ; ಕೆಲವು ಸಮಯದ ನಂತರ ನಿನಗದು ತಿಳಿಯುತ್ತದೆ." (ಮುಂದುವರಿಯುತ್ತದೆ)

# ಹಿಂದೂಧರ್ಮಕ್ಕೆ ಸ್ವಾಮಿ ವಿವೇಕಾನಂದರ ಕೊಡುಗೆಗಳು

ಸ್ವಾಮಿ ವಿವೇಕಾನಂದರು ಹಿಂದೂಧರ್ಮಕ್ಕೆ ಹೊಸತನ್ನು ತುಂಬಿದರು; ಅದನ್ನು ಆಧುನಿಕ ಯುಗದ ಕ್ರಿಯೋತ್ತೇಜಕ ಜೀವನವಿಧಾನವನ್ನಾಗಿ ಪರಿವರ್ತಿಸಿದರು; ಸಾಮಾಜಿಕ ಹಾಗೂ ಆಧ್ಯಾತ್ಮಿಕ ಅಭಿವೃದ್ಧಿಯ ಪ್ರಭಾವಶಾಲಿ ಮಾಧ್ಯಮವನ್ನಾಗಿ ಪರಿವರ್ತಿಸಿದರು.

ಈ ಚೇತೋಹಾರಿ ಅಂಶವನ್ನು ವಿದ್ವತ್ಪೂರ್ಣವಾಗಿ, ವಿವರವಾಗಿ ಬಣ್ಣಿಸಿರುವ ಸ್ವಾಮೀಜಿಯವರು ರಾಮಕೃಷ್ಣ ಮಹಾಸಂಘದ ಸಹಕಾರ್ಯದರ್ಶಿಗಳು. ಇವರು ತಮ್ಮ ಆಳವಾದ ವಿದ್ವತ್ತು ಮತ್ತು ಆಧ್ಯಾತ್ಮಿಕ ಸುಸಂಪನ್ನತೆಗಳಿಗೆ ಪ್ರಸಿದ್ಧರಾಗಿದ್ದಾರೆ. ಪೂಜ್ಯರು, ೨೦೧೦ರ ಏಪ್ರಿಲ್ ೧೨ರಂದು ಹರಿದ್ವಾರದಲ್ಲಿ, ಪೂರ್ಣಕುಂಭ ಮೇಳದ ಸಮಯದಲ್ಲಿ ಅಲ್ಲಿನ ರಾಮಕೃಷ್ಣ ಮಿಷನ್ ಸೇವಾಶ್ರಮವು ಆಯೋಜಿಸಿದ್ದ ಸಾರ್ವಜನಿಕ ಸಭೆಯಲ್ಲಿ ಮಾಡಿದ ಭಾಷಣದ ಕನ್ನಡ ರೂಪಾಂತರ ಇದು.

ಸ್ವಾಮಿ ಭಜನಾನಂದ



ಹರಿದ್ವಾರದಂತಹ ಈ ಪವಿತ್ರ ಕ್ಷೇತ್ರದಲ್ಲಿ, ಕುಂಭಮೇಳದಂತಹ ಶುಭಸಂದರ್ಭದಲ್ಲಿ, ಸ್ವಾಮಿ ವಿವೇಕಾನಂದರ ಬಗ್ಗೆ ಮಾತನಾಡುವುದು ನಿಜಕ್ಕೂ ಒಂದು ಸುಯೋಗ. ಹರಿದ್ವಾರವು ಸಂನ್ಯಾಸಿಗಳ ನಗರ ಮತ್ತು ಕುಂಭಮೇಳವು ಭಾರತದ ಎಲ್ಲಾ ಸಂನ್ಯಾಸಿಗಳನ್ನು ಬರಮಾಡಿಕೊಳ್ಳುವ ಉತ್ಸವ. ಇದು ವಿವೇಕಾನಂದರ ಬಗ್ಗೆ ಮಾತನಾಡಲು ಒಳ್ಳೆಯ ಸ್ಥಳ ಮತ್ತು ಸಂದರ್ಭ, ಏಕೆಂದರೆ ಅವರು ಸಂನ್ಯಾಸಿಗಳಲೆಲ್ಲಾ ರಾಜರಂತೆ ಇದ್ದರು. ಅವರು ಉನ್ನತ ಮಟ್ಟದ ಸಂನ್ಯಾಸಿಯಾಗಿ, ಒಬ್ಬ ಪರಮಹಂಸ ಪರಿವ್ರಾಜಕಾಚಾರ್ಯರಾಗಿ ಅತಿ ಉನ್ನತ ಮಟ್ಟದ ಆಧ್ಯಾತ್ಮಿಕ ಸ್ಥಿತಿಯನ್ನು ತಲುಪಿದ್ದವರು. 'ಶುಕಾಷ್ಟಕ' ಎಂಬ ಸ್ತೋತ್ರದ ಎಂಬ ಒಂದು ಶ್ಲೋಕದಲ್ಲಿ ಈ ಮಾತು ಬರುತ್ತದೆ: "ನಿಸ್ತ್ರೈಗುಣ್ಯೇ ಪಥಿ ವಿಚರತಾಮ್ ಕೋ ವಿಧಿಃ ಕೋ ನಿಷೇಧಃ" ಅಂದರೆ "ಯಾವ ವಿಧಿ ಅಥವಾ ನಿಷೇಧ ತಾನೇ ಮೂರು ಗುಣಗಳ ಆಚೆಗಿರುವ ಆಧ್ಯಾತ್ಮಿಕ ಮಾರ್ಗದಲ್ಲಿ ಸ್ವೇಚ್ಛೆಯಿಂದ ಸಂಚರಿಸುತ್ತಿರುವವನಿಗೆ ಅನ್ವಯಿಸಬಲ್ಲುದು?!"

ಪರಿಪೂರ್ಣ ಸಾಕ್ಷಾತ್ಕಾರದ ಮೂರ್ತಿಯಾಗಿದ್ದರೂ ಸ್ವಾಮೀಜಿ, ಪಶ್ಚಿಮದೇಶದಲ್ಲಿದ್ದಾಗಲೂ ಕೂಡ, ಒಬ್ಬ ನೈಜ ಸಂನ್ಯಾಸಿಯ ಬಾಳನ್ನೇ ಬದುಕಿದ್ದರು. ಅನೇಕ ಜನ ಅವರು ವೈಭವಯುತವಾದ ಜೀವನವನ್ನೇ ಅಲ್ಲಿ ನಡೆಸಿದ್ದರೆಂದು ಭಾವಿಸುತ್ತಾರೆ. ಇದು ನಿಜವಲ್ಲ. ಅವರೇ ಒಮ್ಮೆ, ತಾವು ಭಾರತದಲ್ಲಿದ್ದಾಗ ಪರಿವ್ರಾಜಕ ಜೀವನ ನಡೆಸಿದರೆಂದೂ, ಅದನ್ನೇ ಅಮೆರಿಕೆಯಲ್ಲಿಯೂ ಮುಂದುವರೆಸಿದರೆಂದೂ ಬರೆಯುತ್ತಾರೆ.

ವಿಮಾನಕ್ಕೆ ವಿಮಾನನಿಲ್ದಾಣವಿದ್ದಂತೆ, ಸ್ವಾಮೀಜಿಯ ಜೀವನಕ್ಕೆ ಸಂನ್ಯಾಸಿಯ ಜೀವನ ಇತ್ತು ಎಂದರೆ ತಪ್ಪಾಗಲಾರದು. ಒಂದು ವಿಮಾನ ಪ್ರಪಂಚದಲ್ಲಿ ಎಲ್ಲೇ ಸುತ್ತಾಡಿದರೂ, ಕಡೆಗೆ ಬಂದು ನಿಲ್ಲುವುದು ವಿಮಾನ ನಿಲ್ದಾಣದಲ್ಲೇ. ಹಾಗೆಯೇ ಇಡೀ ಪ್ರಪಂಚವನ್ನೇ ಸುತ್ತಾಡಿದರೂ ಸ್ವಾಮೀಜಿ ಸಂನ್ಯಾಸಿ ಜೀವನಕ್ಕೇ ಯಾವಾಗಲೂ ಹಿಂತಿರುಗುತ್ತಿದ್ದರು. ಸಂನ್ಯಾಸಿ ಜೀವನ ಸ್ವಾಮೀಜಿಯವರಿಗೆ ಯಾವುದೇ ಒಂದು ಅಡ್ಡಿಯನ್ನು ಒಡ್ಡುವುದಾಗಿರಲಿಲ್ಲ. ಅದಕ್ಕೆ ಬದಲಾಗಿ, ಅದು ಮುಕ್ತಿಯಲ್ಲಿ ಸುಸಂಪನ್ನಗೊಳ್ಳುವ ಒಂದು ರಾಜಮಾರ್ಗವೇ ಆಗಿತ್ತು.

ಸಂನ್ಯಾಸಿಯ ಜೀವನ ಅವರನ್ನು ಕೌಟುಂಬಿಕ ಮತ್ತು ಸಾಮಾಜಿಕ ಬಂಧನಗಳಿಂದ ವಿಮುಕ್ತಿಗೊಳಿಸಿ, ತಮ್ಮ ಇಡೀ ಜೀವನವನ್ನು ಮಾನವತೆಯ ಸೇವೆಗೆ ಮುಡುಪಾಗಿಡುವಂತೆ ಮಾಡಿತು. ನಿಜಕ್ಕೂ ಅವರ ಸಾರ್ವಜನಿಕ ಜೀವನ (ಕೇವಲ ಒಂಬತ್ತುವರೆ ವರ್ಷಗಳು ಮಾತ್ರ) ನಿರಂತರವಾಗಿ ಮಾನವಪ್ರೇಮದ ಭವ್ಯ ವೇದಿಕೆಯ ಮೇಲೆ ಸಮರ್ಪಿಸಿದ ಸ್ವಾರ್ಥರಹಿತ ಬದುಕಾಗಿತ್ತು. ಈ ಸಂಕ್ಷಿಪ್ತಕಾಲದಲ್ಲಿ ಅವರು ಮಾನವತೆಯ ಕಲ್ಯಾಣಕ್ಕಾಗಿ ಬಹು ಮುಖ್ಯ ಕೊಡುಗೆಗಳನ್ನು ನೀಡಿದ್ದಾರೆ.

ಈ ಕೊಡುಗೆಗಳನ್ನು ಮುಖ್ಯವಾಗಿ ಮೂರು ವಿಭಾಗಗಳಾಗಿ ವಿಂಗಡಿಸಬಹುದು: ೧. ಹಿಂದೂ ಧರ್ಮಕ್ಕೆ ನೀಡಿದ ಕೊಡುಗೆ, ೨. ಭಾರತದ ಉನ್ನತಿಗೆ ನೀಡಿದ ಕೊಡುಗೆ ಮತ್ತು ೩. ಒಟ್ಟಾರೆ ಜಾಗತಿಕ ಸಂಸ್ಕೃತಿಗೆ ನೀಡಿದ ಕೊಡುಗೆ. ಕಾಲಮಿತಿಯ ಕಾರಣ ಈಗ ನಾನು ಹಿಂದೂಧರ್ಮಕ್ಕೆ ಸ್ವಾಮೀಜಿಯವರು ನೀಡಿದ ಕೊಡುಗೆಗಳ ಬಗ್ಗೆ ಮಾತ್ರ ಮಾತನಾಡುತ್ತೇನೆ.

## ಹಿಂದೂ ಧರ್ಮಕ್ಕೆ ಸ್ವಾಮೀಜಿಯವರ ಕೊಡುಗೆ

**೧. ವೈಶಿಷ್ಟ್ಯತೆ ಮತ್ತು ಸಮಗ್ರತೆ :** ಸ್ವಾಮಿ ವಿವೇಕಾನಂದರ ಮುಖ್ಯ ಕೊಡುಗೆಯೆಂದರೆ ಹಿಂದೂ ಧರ್ಮಕ್ಕೆ ಅದರದೇ ಆದ ಸರಿಯಾದ ವೈಶಿಷ್ಟ್ಯತೆಯನ್ನು (Identity), ಸಮಗ್ರತೆಯನ್ನು (Totality) ಮತ್ತು ಪರಿಪೂರ್ಣತೆಯನ್ನು (wholeness) ನೀಡಿದ್ದು. ಸ್ವಾಮೀಜಿಯವರ ಕಾಲಕ್ಕೆ ಮುಂಚೆ, ಹಿಂದೂ ಧರ್ಮದಲ್ಲಿ ಅನೇಕ ಸ್ವತಂತ್ರ ಪಂಗಡಗಳಿದ್ದು, ಒಂದು ಪಂಗಡ ತಾನು ಮತ್ತೊಂದು ಪಂಗಡಕ್ಕಿಂತ ಶ್ರೇಷ್ಠವೆಂದು ಹೇಳಿಕೊಳ್ಳುತ್ತಿತ್ತು. ಎಲ್ಲಾ ಪಂಗಡಗಳಿಗೂ ಮೂಲಭೂತವಾದ ಸಾಮಾನ್ಯ ತಳಹದಿಯಿರುವುದೆಂಬ ತಿಳಿವಳಿಕೆಯ ಅಭಾವ ಹಿಂದೂ ಧರ್ಮದಲ್ಲಿ ಎದ್ದುಕಾಣುತ್ತಿತ್ತು. ಸಹೋದರಿ ನಿವೇದಿತಾ 'ವಿವೇಕಾನಂದರ ಕೃತಿಶ್ರೇಣಿ'ಗೆ ಬರೆದ ತಮ್ಮ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ: " ಸ್ವಾಮಿ ವಿವೇಕಾನಂದರು ಸರ್ವಧರ್ಮ ಸಮ್ಮೇಳನದಲ್ಲಿ ನೀಡಿದ ಉಪನ್ಯಾಸಗಳ ಸ್ವರೂಪವನ್ನು ಹೀಗೆ ಸಂಕ್ಷೇಪಿಸಬಹುದು: ಪ್ರಾರಂಭದಲ್ಲಿ ಅವರು ಹಿಂದೂಗಳ ಧಾರ್ಮಿಕ ಭಾವನೆಗಳನ್ನು ಕುರಿತು ಹೇಳಹೊರಟರು. ಆದರೆ ಅವರು ತಮ್ಮ ಉಪನ್ಯಾಸವನ್ನು ಮುಗಿಸಿದಾಗ, ಹಿಂದೂ ಧರ್ಮವೇ ಪುನಃ ಸೃಷ್ಟಿಗೊಂಡಿತ್ತು."

ಸ್ವಾಮಿ ವಿವೇಕಾನಂದರು ಹಿಂದೂ ಧರ್ಮಕ್ಕೆ ತನ್ನದೇ ಆದ ವೈಶಿಷ್ಟ್ಯವಷ್ಟನ್ನೇ ಅಲ್ಲದೆ ಸಮಗ್ರತೆಯನ್ನೂ ತಂದುಕೊಟ್ಟರು. ಅಮೆರಿಕೆಗೆ ಹೋಗುವ ಮೂಲಕ ಅವರು ಪಶ್ಚಿಮ ಜಗತ್ತಿನ ಮೊದಲ ಹಿಂದೂ ಮಿಷನರಿಯಾದರು. ೧೮೯೩ರಲ್ಲಿ ನಡೆದ ಸರ್ವಧರ್ಮ ಸಮ್ಮೇಳನವನ್ನು ಪ್ರತಿನಿಧಿಸುವ ಮೂಲಕ, ಪಶ್ಚಿಮದಲ್ಲಿ ಹಿಂದೂ ಧರ್ಮದ ಬೋಧಕನಾಗಿ ಸ್ವಾಮೀಜಿ, ಹಿಂದೂ ಧರ್ಮದ ಸಮಗ್ರತೆಯನ್ನು ಪ್ರತಿನಿಧಿಸುವ ದ್ಯೋತಕವಾದರು (ಹೊಸ ಪಂಗಡದ ನಾಯಕನಾಗುವ ಬದಲಿಗೆ). ಅವರ ಭಾಷಣಗಳಿಂದ ಅವರು ಹಿಂದೂಗಳ ಚೈತನ್ಯವನ್ನು ಬಡಿದೆಬ್ಬಿಸಿದರು; ತಮ್ಮದೇ 'ಸಾಮಾನ್ಯ ನೆಲೆಗಟ್ಟನ್ನು' ಅವರು ಹಿಂದೂಗಳಿಗೆ ಎತ್ತಿತೋರಿಸಿದರು ಮತ್ತು ಹಿಂದೂಗಳಲ್ಲಿ ಒಗ್ಗಟ್ಟನ್ನು ಬಲಪಡಿಸಿದರು. ಸ್ವಾಮೀಜಿ ಹಿಂದೂಗಳಿಗೆ, 'ನಾವೆಲ್ಲ ಒಂದೇ ಪಂಗಡಕ್ಕೆ ಸೇರಿದವರು' ಎನ್ನುವ ಭಾವನೆಯನ್ನು ಜಾಗೃತಗೊಳಿಸಿದರು. ಇದನ್ನೇ ಗುರುತು ಮಾಡಿ ತೋರಿಸುತ್ತಾ ಪ್ರಸಿದ್ಧ ವಿದ್ವಾಂಸರಾದ ಕೆ.ಎಂ. ಪಣಿಕ್ಕರರು ಈ ರೀತಿ ಬರೆಯುತ್ತಾರೆ: "ಈ ಹೊಸ ಶಂಕರಾಚಾರ್ಯರನ್ನು ಹಿಂದೂ ಸಿದ್ಧಾಂತದ ಸಮಗ್ರತೆಯ ಸಂಘಟಕರೆಂದು ನಾವು ಹೆಸರಿಸಬಹುದು."

**೨. ಹಿಂದೂ ಧರ್ಮದ ಸಂಪದ್ಭರಿತ ವೈವಿಧ್ಯತೆಯನ್ನು ಕಾಪಾಡಿಕೊಳ್ಳುವಿಕೆ:** ಹಿಂದೂ ಧರ್ಮವು ವಿವಿಧ ಭಾಷೆ, ಜನ, ಪಂಗಡ – ಇವುಗಳ ನಡೆ, ನುಡಿ, ಆಚಾರ ವಿಚಾರಗಳ ಸಮ್ಮಿಳನ – ವಿವಿಧ ಸಮೂಹಗಳ ಒಂದು ಬೃಹತ್ ಸಮ್ಮಿಳನ. ಶ್ರೀರಾಮಕೃಷ್ಣ ಮತ್ತು ವಿವೇಕಾನಂದರು ಈ ಎಲ್ಲಾ ವೈವಿಧ್ಯತೆಗಳನ್ನೊಳಗೊಂಡ ಹಿಂದೂ ಸಂಸ್ಕೃತಿಯನ್ನು ಪೂರ್ಣವಾಗಿ, ಅದರ ಯಥಾ ರೂಪದಲ್ಲಿ ಒಪ್ಪಿಕೊಂಡ ಮಹನೀಯರು. ಅವರು ಪೂರ್ಣ ವೇದಭಾಗವನ್ನು – ಜ್ಞಾನಕಾಂಡ ಮತ್ತು ಕರ್ಮಕಾಂಡಗಳನ್ನೂ ಒಳಗೊಂಡು – ಸ್ವೀಕರಿಸಿದರು. ಹಾಗೆಯೇ, ಹಿಂದೂಧರ್ಮಕ್ಕೆ ಸೇರಿದ ಎಲ್ಲ ಪುರಾಣಗಳು ಮತ್ತು ಇತಿಹಾಸಗಳನ್ನೂ, ಶೈವ, ಶಾಕ್ತ ಮತ್ತು ವೈಷ್ಣವ ಮುಂತಾದ ಪಂಗಡಗಳನ್ನೂ, ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಮುಂತಾದ ತತ್ತ್ವಶಾಸ್ತ್ರ ಪ್ರಭೇದಗಳನ್ನೂ, ಮೂರ್ತಿಪೂಜೆಯಿಂದ ಹಿಡಿದು 'ಮಾನವನೇ ಮಾಧವ' ಎಂದು ಕರೆದು ಆರಾಧಿಸುವವರೆಗೆ ಎಲ್ಲಾ ವಿಧವಾದ ಆರಾಧನೆಗಳನ್ನೂ, ಎಲ್ಲ ಬಗೆಯ ಅನುಭಾವದ ರೀತಿಗಳನ್ನೂ, ಎಲ್ಲ ಬಗೆಯ ಕಟ್ಟುಕಥೆ ಮತ್ತು ಗಾಥೆಗಳನ್ನೂ ಅವುಗಳಲ್ಲಿರುವ ವೈವಿಧ್ಯತೆಯನ್ನು ಒಪ್ಪಿಕೊಂಡು ಶ್ರೀರಾಮಕೃಷ್ಣ ಪರಮಹಂಸರು ಮತ್ತು ವಿವೇಕಾನಂದರು ಸಂರಕ್ಷಿಸಿದರು. ಅದಕ್ಕೆ ವಿರುದ್ಧವಾಗಿ ಬ್ರಹ್ಮಸಮಾಜದಂತಹ ಸಮಾಜ ಸುಧಾರಕ ಸಂಸ್ಥೆಗಳು, ಎಲ್ಲವನ್ನೂ ಬಲವಂತದಿಂದ ಒಂದೇ ಏಕರೂಪಕ್ಕೆ ತರುವಂಥ ಸುಧಾರಣೆ ತರಲು ಪ್ರಯತ್ನಿಸಿದವು. ಈ ಸಂಸ್ಥೆಗಳು ಒಂದು ಪಕ್ಷ ತಮ್ಮ ಪ್ರಯತ್ನದಲ್ಲಿ ಯಶಸ್ಸನ್ನು ಗಳಿಸಿದ್ದೇ ಆಗಿದ್ದರೆ, ತನ್ನ ಬಹು ಅಮೂಲ್ಯವಾದ ವೈವಿಧ್ಯತೆಯನ್ನೂ, ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಸಿರಿಯನ್ನು ಹಿಂದೂ ಧರ್ಮವು ಕಳೆದುಕೊಳ್ಳುತ್ತಿತ್ತು. ಅದರಿಂದಲೇ ಪ್ರಸಿದ್ಧ ರಾಜಕೀಯ ನಾಯಕರೂ, ಘನ ವಿದ್ವಾಂಸರೂ ಆಗಿದ್ದ ಶ್ರೀ ರಾಜಗೋಪಾಲಾಚಾರಿ ಒಮ್ಮೆ ಹೀಗೆ ಹೇಳಿದರು: "ಸ್ವಾಮಿ ವಿವೇಕಾನಂದರು ಹಿಂದೂ ಸಂಸ್ಕೃತಿಯನ್ನು ಮತ್ತು ಭಾರತವನ್ನು ಪತನದಿಂದ ರಕ್ಷಿಸಿದರು. ಅವರಿಲ್ಲದಿದ್ದಲ್ಲಿ ನಾವು ನಮ್ಮ ಧರ್ಮವನ್ನು ಕಳೆದುಕೊಳ್ಳುತ್ತಿದ್ದೆವು; ಅದಲ್ಲದೆ ಸ್ವಾತಂತ್ರ್ಯವನ್ನೂ ಗಳಿಸಲು ಸಾಧ್ಯವಾಗುತ್ತಿರಲಿಲ್ಲ." ಈ ಸತ್ಯತೆಯನ್ನು ಅರಿಯಲು ನಾವು ೧೬ನೇ ಶತಮಾನದ ಯುರೋಪಿನತ್ತ ಗಮನ ಹರಿಸಬೇಕಾಗುತ್ತದೆ. ಆ ಕಾಲಾವಧಿಯಲ್ಲಿ ಪ್ರಾಟಸ್ಟೆಂಟ್ ಸುಧಾರಣೆಯೆಂದು ಕರೆಸಿಕೊಳ್ಳುವ ಒಂದು ಸುಧಾರಣಾ ಆಂದೋಲನವು, ಕ್ರೈಸ್ತ ಧರ್ಮದ ಮಹತ್ತರ ಆಧ್ಯಾತ್ಮಿಕ ಸಂಪತ್ತು, ನಿಗೂಢವಾದ ವಿಧಿವಿಧಾನಗಳು, ಸಂನ್ಯಾಸ ಸಂಪ್ರದಾಯ, ಸಂತರ ಸತ್ಕಾರ, ತಾಯ್ತನದ ಹಿರಿಮೆ ಮತ್ತಿತರ ಮೌಲ್ಯಗಳನ್ನು ನಾಶಗೊಳಿಸಿತು. ಆ ಜಾಗದಲ್ಲಿ ನಾರ್ವೆ, ಸ್ವೀಡನ್, ಜರ್ಮನಿ, ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಆರ್ಥಿಕ ಸ್ಪರ್ಧೆ ಮತ್ತು ಬಂಡವಾಳಶಾಹಿತನವನ್ನು ಪ್ರತಿಷ್ಠಾಪಿಸಿತು. ಅಂತಹ

ಸನ್ನಿವೇಶವನ್ನು ೧೯ನೇ ಶತಮಾನದ ಭಾರತದಲ್ಲಿ, ಶ್ರೀರಾಮಕೃಷ್ಣ ಪರಮಹಂಸರು ಮತ್ತು ವಿವೇಕಾನಂದರು ಸಮಯಕ್ಕೆ ಸರಿಯಾಗಿ ಅವತರಿಸಿ, ತಡೆದರೆಂದು ಹೇಳಬಹುದು.

**೩. ವಿಶ್ವವ್ಯಾಪಿಯನ್ನಾಗಿ ಮಾಡಿದ್ದು :** ಹಿಂದಿನ ಕಾಲದಲ್ಲಿ ಭಾರತ ಭೂಖಂಡದಲ್ಲಿ ಪ್ರಚಲಿತವಾಗಿದ್ದ 'ಸನಾತನ ಧರ್ಮ'ವು ವಿಶ್ವಕ್ಕೇ ಅನ್ವಯಿಸುವಂಥದಾಗಿತ್ತು. ಅದು ಕಾಲಕ್ರಮದಲ್ಲಿ ಭಾರತಕ್ಕೆ ಬಂದ ಎಲ್ಲ ಹೊಸ ಪಂಗಡಗಳ, ಧರ್ಮಗಳ ವಿದೇಶಿ ಜನಾಂಗಗಳು ಮತ್ತು ಪಂಗಡಗಳನ್ನು ತನ್ನ ತೆಕ್ಕೆಗೆ ಸೆಳೆದುಕೊಂಡಿತು. ಆದರೆ ಮಧ್ಯಯುಗದಲ್ಲಿ ಅದು ತನ್ನ ಬಾಗಿಲನ್ನು ಹೊರಗಿನವರಿಗೆ ಮುಚ್ಚಿ ಬಿಟ್ಟಿತು. ಹೀಗಾಗಿ ಅದು ಒಂದು ಸಂಕುಚಿತ ಜನಾಂಗೀಯ ಧರ್ಮವಾಗಿಬಿಟ್ಟಿತು. ಸ್ವಾಮೀಜಿಯವರು ತಾವು ಗೈಯಬೇಕೆಂದು ನಿರ್ಧರಿಸಿದ ಹಲವಾರು ಕಾರ್ಯಗಳಲ್ಲಿ ಹಿಂದೂ ಸಂಸ್ಕೃತಿಯನ್ನು ಎಲ್ಲ ಜನಾಂಗದ ಜನರಿಗೆ ತೆರೆದಿಡಬೇಕೆಂಬುದೂ ಒಂದು.

ಸ್ವಾಮೀಜಿ ಹಿಂದೂಧರ್ಮವನ್ನು ವಿಶ್ವವ್ಯಾಪಕಗೊಳಿಸಿದರಷ್ಟೇ ಅಲ್ಲ, ಅದಕ್ಕೆ ಶಕ್ತಿತುಂಬಿ ಚೈತನ್ಯಗೊಳಿಸಿದರು; ಹಿಂದೂಗಳಲ್ಲಿ ಸೇವೆಯ ಮನೋಭಾವವನ್ನು ರೂಢಿಸಿದರು. ಪ್ರಪಂಚದ ಎಲ್ಲ ಭಾಗಗಳಿಗೆ ಭಾರತದ ಪ್ರಾಚೀನ ಆಧ್ಯಾತ್ಮಿಕ ಸಂದೇಶವು ತಲುಪ ಬೇಕೆಂದು ಅವರು ಆಶಿಸಿದರು. ಆ ಮೂಲಕ ಎಲ್ಲರೂ ಆಧ್ಯಾತ್ಮಿಕ ಜಾಗೃತಿಯನ್ನು ಪಡೆಯಬೇಕೆಂಬುದೇ ಅವರ ಬಯಕೆಯಾಗಿತ್ತು. ಹಾಗೆಂದೇ ಅವರು ಹೀಗೆ ಕರೆಕೊಟ್ಟರು, "ಎದ್ದೇಳು, ಭಾರತ! ನಿನ್ನ ಆಧ್ಯಾತ್ಮಿಕತೆಯಿಂದ ಜಗತ್ತನ್ನೇ ಗೆದ್ದುಕೋ" ಎಂದು.

**೪. ಹಿಂದೂ ಧರ್ಮವು ಪ್ರಾಮುಖ್ಯತೆಗೆ ಏರಿದ್ದು:** ಹತ್ತೊಂಬತ್ತನೇ ಶತಮಾನದ ಅಂತ್ಯಕ್ಕೆ ಭಾರತದ ಬಗ್ಗೆ ಪಾಶ್ಚಿಮಾತ್ಯರಿಗೆ ಬಹಳ ಕೀಳಾದ ಅಭಿಪ್ರಾಯವಿತ್ತು. ಹಿಂದೂ ಧರ್ಮವೆಂದರೆ, ಮೂಢ ನಂಬಿಕೆಗಳಿಂದ ಕೂಡಿದ ಧರ್ಮವೆಂದೂ, ಹಿಂದೂಗಳೆಂದರೆ ವಿಗ್ರಹಗಳು, ಹಸುಗಳು ಮತ್ತು ಹಾವುಗಳನ್ನು ಆರಾಧಿಸುವ ಜನ ಗಳೆಂದೂ ಅವರು ತಿಳಿದಿದ್ದರು. ಸ್ವಾಮಿ ವಿವೇಕಾನಂದರು ಪಶ್ಚಿಮದ ದೇಶಗಳಲ್ಲಿ ಮಾಡಿದ ಸಾಧನೆಗಳಲ್ಲಿ ಮಹತ್ವವಾದದ್ದೆಂದರೆ ಈ ತಪ್ಪು ಅಭಿಪ್ರಾಯವನ್ನು ಬದಲಿಸಿದ್ದು.

ಸ್ವಾಮೀಜಿಯವರ ಪ್ರಕಾರ ಧರ್ಮವು ಪ್ರಮುಖವಾದ ಅಂಶಗಳನ್ನು ಹೊಂದಿರುವ ಒಂದು ಒಳಕೋಶವನ್ನು, ಪ್ರಮುಖವಲ್ಲದ ಅಂಶಗಳನ್ನೊಳಗೊಂಡಿರುವ ಇನ್ನೊಂದು ಹೊರಕೋಶವನ್ನೂ ಹೊಂದಿದೆ. ಹೊರಕೋಶವು ಪ್ರಮುಖವಲ್ಲದ ಪುರಾಣ, ಆಚಾರ, ಪದ್ಧತಿ ಮತ್ತು ಹಬ್ಬಗಳನ್ನು ಒಳಗೊಂಡಿದೆ. ಒಳಕೋಶವು ಮುಖ್ಯವಾದ ಆಧ್ಯಾತ್ಮಿಕತೆಯಿಂದ ತುಂಬಿದೆ. ಆಧ್ಯಾತ್ಮಿಕತೆಯ ಕ್ಷೇತ್ರದಲ್ಲಿ ಹಿಂದೂ ಧರ್ಮವು ಬೇರೆಲ್ಲ ಧರ್ಮ ಗಳಿಗಿಂತ ಶ್ರೇಷ್ಠವಾಗಿದೆಯೆಂದು ಸ್ವಾಮೀಜಿ ತೋರಿಸಿಕೊಟ್ಟರು. ಹಾಗೆಯೇ ಹಿಂದೂ ಧರ್ಮದ ಸರ್ವಮಾನ್ಯತೆ ಇರುವುದು, ಹಿಂದೂ ಆಧ್ಯಾತ್ಮಿಕತೆಯು ನಿತ್ಯತತ್ತ್ವಗಳು ಮತ್ತು ಆಧ್ಯಾತ್ಮಿಕ ಜಗತ್ತಿನ ಶಾಶ್ವತ ಮೌಲ್ಯಗಳ ಆಧಾರದ ಮೇಲೆ ನಿಂತಿರುವುದರಿಂದಲೇ ಎಂದು ಅವರು ಪ್ರತಿಪಾದಿಸಿದರು.

ವಿಜ್ಞಾನವು ಭೌತಶಾಸ್ತ್ರ, ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಮುಂತಾದ ವಿಭಾಗಗಳನ್ನು ಒಳಗೊಂಡಿದೆ. ಆದರೆ ಅವೆಲ್ಲ ಭೌತ ಜಗತ್ತಿಗೆ ಸೀಮಿತವಾದ ಸಾರ್ವತ್ರಿಕ ಸತ್ಯಗಳು ಮತ್ತು ನಿಯಮಗಳ ಮೇಲೆ ಮಾತ್ರ ಆಧಾರಿತವಾಗಿವೆ. ಹೀಗೆಯೇ, ಪ್ರಪಂಚದಲ್ಲಿ ಕಂಡುಬರುವ ವಿವಿಧ ಧರ್ಮಗಳು ಕೂಡ ಶಾಶ್ವತವಾದ ಸತ್ಯಗಳು ಮತ್ತು ನಿಯಮಗಳ ಮೇಲೆ ಆಧಾರಿತವಾಗಿವೆ. ವ್ಯತ್ಯಾಸವಿಷ್ಟೇ, ಆ ಸತ್ಯಗಳು ಮತ್ತು ನಿಯಮಗಳು ಆಧ್ಯಾತ್ಮಿಕ ಪ್ರಪಂಚಕ್ಕೆ ಸೇರಿವೆ! ಈ ಸತ್ಯಗಳು ಮತ್ತು ನಿಯಮಗಳನ್ನು ಮೊದಲು ಕಂಡು ಹಿಡಿದವರೆಂದರೆ, ಪ್ರಾಚೀನ ಭಾರತದ ಋಷಿಮುನಿಗಳು. ಭೌತಿಕ ಪ್ರಪಂಚದಲ್ಲಿ ವಿಜ್ಞಾನದ ಶ್ರೇಷ್ಠತೆಯನ್ನು ನಾವು ಒಪ್ಪಿಕೊಳ್ಳುತ್ತೇವೆ. ಸ್ವಾಮೀಜಿ ಹೇಳುತ್ತಾರೆ, ಇದೇ ರೀತಿ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಹಿಂದೂ ಆಧ್ಯಾತ್ಮಿಕತೆಯ ಶ್ರೇಷ್ಠತೆಯನ್ನು ಇಡೀ ಜಗತ್ತು ಒಪ್ಪಿಕೊಳ್ಳ ಬೇಕೆಂದು. ಹಿಂದೂ ಧರ್ಮವನ್ನು ಎಲ್ಲ ಧರ್ಮಗಳ ಮಾತೆ ಎಂದು ಪರಿಗಣಿಸಬೇಕು, ಏಕೆಂದರೆ, ಆ ಎಲ್ಲ ಧರ್ಮಗಳಿಗೆ ಆಧಾರಭೂತವಾದ ಚಿರಂತನ ಸಾರ್ವತ್ರಿಕ ಆಧ್ಯಾತ್ಮಿಕ ತತ್ತ್ವಗಳನ್ನು ಕಂಡುಹಿಡಿದವರು ಮತ್ತು ಸುವ್ಯವಸ್ಥಿತಗೊಳಿಸಿದವರು ಪ್ರಾಚೀನ ಹಿಂದೂ ಋಷಿಮುನಿಗಳು. ಹೀಗೆ ಸ್ವಾಮೀಜಿ ಹಿಂದೂ ಧರ್ಮದ ಆಧ್ಯಾತ್ಮಿಕ ಸರ್ವಮಾನ್ಯತೆಯನ್ನು ಎತ್ತಿಹಿಡಿದರು. ಆ ಮೂಲಕ ಹಿಂದೂಗಳಿಗೆ ತಮ್ಮ ಧರ್ಮದ ಬಗ್ಗೆ ಅಭಿಮಾನ ಮೂಡುವಂತೆ ಮಾಡಿದರು ಮತ್ತು ತಮ್ಮ ಆಧ್ಯಾತ್ಮಿಕ ಪರಂಪರೆಯ ಅನರ್ಘ್ಯ ಸಂಪತ್ತಿನ ಬಗ್ಗೆ ಅವರಿಗೆ ಅರಿವು ಉಂಟಾಗುವಂತೆ ಮಾಡಿದರು.

ಮ್ಯಾಕ್ಸ್ ಮುಲರ್ ಮುಂತಾದ ಹಲವಾರು ಪಾಶ್ಚಾತ್ಯ ವಿದ್ವಾಂಸರು ಭಾರತದ ಅಧಃಪತನ ಮತ್ತು ಬಡತನಕ್ಕೆ ಹಿಂದೂ ಧರ್ಮವೇ ಮುಖ್ಯ ಕಾರಣವೆಂದು ದೂಷಿಸುತ್ತಾರೆ. ಅದಕ್ಕೆಂದೇ ಅವರು ಹಿಂದೂ ಧರ್ಮದಲ್ಲಿ ಸುಧಾರಣೆ ಆಗಬೇಕೆಂದು ಬಯಸಿ ದರು. ಆದರೆ ಸ್ವಾಮೀಜಿ, ಭಾರತದ ಅಧಃಪತನಕ್ಕೆ ಹಿಂದೂ ಧರ್ಮವು ಕಾರಣವಲ್ಲವೆಂದೂ, ಅದಕ್ಕೆ ಕಾರಣ ಸಾಮಾಜಿಕ ಸ್ಥಿತಿ ಅಂದರೆ, ಬಡ ಜನತೆಯ ಬಗ್ಗೆ ಮತ್ತು ಮಹಿಳೆಯರ ಬಗೆಗಿನ ನಿರ್ಲಕ್ಷ್ಯ ಮನೋಭಾವ ಎಂದೂ ತೋರಿಸಿದರು.

**೫. ಉಪನಿಷತ್ತುಗಳ ಮಹತ್ವ :** ಸ್ವಾಮಿ ವಿವೇಕಾನಂದರು ಹಿಂದೂ ಧರ್ಮಕ್ಕೆ ನೀಡಿದ ಇನ್ನೊಂದು ಮಹತ್ವದ ಕೊಡುಗೆ ಯೆಂದರೆ, ಉಪನಿಷತ್ತುಗಳ ಪ್ರಾಮುಖ್ಯತೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸಿದ್ದು. ಉಪನಿಷತ್ತುಗಳು ಪ್ರಾಚೀನ ಭಾರತದ ಋಷಿಮುನಿಗಳು ಕಂಡುಹಿಡಿದ ಚಿರಂತನ ಸತ್ಯಗಳ ಮತ್ತು ಆಧ್ಯಾತ್ಮಿಕ ಜಗತ್ತಿನ ಸತ್ಯತತ್ತ್ವಗಳ ಆಕರಗಳು ಎಂಬ ಪ್ರಜ್ಞೆಯನ್ನು ಸ್ವಾಮೀಜಿ ಹಿಂದೂಗಳಲ್ಲಿ ಹರಡಿದರು. ಉಪನಿಷತ್ತುಗಳೆಲ್ಲ ಸೇರಿಯೇ 'ವೇದಾಂತ' ಎನ್ನಿಸಿಕೊಳ್ಳುತ್ತದೆ. 'ವೇದಾಂತ' ಎಂಬ ಪದವನ್ನು ಉಪನಿಷತ್ತುಗಳಲ್ಲಿ ದಾಖಲಿಸಿರುವ ಚಿರಂತನ ಆಧ್ಯಾತ್ಮಿಕ ಸತ್ಯಗಳನ್ನು ಕುರಿತು ಮತ್ತು ಅವುಗಳನ್ನೇ ಆಧರಿಸಿದ ತತ್ತ್ವಶಾಸ್ತ್ರ ವಿಭಾಗವನ್ನು ಹೆಸರಿಸಲು ಉಪಯೋಗಿಸಲಾಗುತ್ತದೆ.

ಹಿಂದೂ ಧಾರ್ಮಿಕ ಸಂಪ್ರದಾಯಗಳು ಉಪನಿಷತ್ತುಗಳನ್ನು, ಆಧ್ಯಾತ್ಮಿಕ ವಿಷಯಗಳಲ್ಲಿನ ಅತ್ಯಂತ ಉನ್ನತ ಅಧಿಕೃತ ಗ್ರಂಥಗಳೆಂದು ಪರಿಗಣಿಸುತ್ತವೆ. ಅವುಗಳನ್ನು 'ಶ್ರುತಿ' ಎಂದು ಕರೆಯಲಾಗುತ್ತದೆ. ಉಪನಿಷತ್ತುಗಳು ಏಕೆ ಅತ್ಯುನ್ನತ ಪ್ರಮಾಣಗಳೆಂಬುದನ್ನು ಸ್ವಾಮಿ ವಿವೇಕಾನಂದರು ವಿವರಿಸುತ್ತಾರೆ. ಇದಲ್ಲದೆ, ಸ್ವಾಮೀಜಿ

ವೇದಾಂತವನ್ನು ಧಾರ್ಮಿಕ ಕ್ಷೇತ್ರದಲ್ಲಿ ಸಾರ್ವತ್ರಿಕ ತತ್ತ್ವವನ್ನಾಗಿ ಸಂಸ್ಥಾಪಿಸಲು ಬೇಕಾದ ಈ ಕೆಳಗಿನ ಸಹಾಯಕ ಅಂಶಗಳನ್ನೂ ಮುಂದಿಡುತ್ತಾರೆ:

೧. ಉಪನಿಷತ್ತುಗಳಲ್ಲಿ ಪ್ರತಿಪಾದಿತವಾಗಿರುವ ಚಿರಂತನ ಸತ್ಯಗಳು ಆಧುನಿಕ ವಿಜ್ಞಾನಕ್ಕೆ ವಿರೋಧವಲ್ಲವೆಂಬುದನ್ನೂ, ಅದಕ್ಕೆ ಬದಲಾಗಿ, ಅವು ಪೂರಕವೆಂಬುದನ್ನೂ ಸ್ವಾಮೀಜಿ ತೋರಿಸಿಕೊಟ್ಟರು. ಹಾಗೆ ನೋಡಿದರೆ, ವೇದಾಂತವನ್ನು 'ಪ್ರಜ್ಞೆಯ ವಿಜ್ಞಾನ' (Science of Consciousness) ಎಂದು ಕರೆಯಬಹುದೆಂದು ಅವರು ಘೋಷಿಸಿದರು.

೨. ಸ್ವಾಮಿ ವಿವೇಕಾನಂದರು ಉಪನಿಷತ್ತುಗಳು ಮತ್ತಿತರ ಶಾಸ್ತ್ರಗಳನ್ನು ಆಧುನಿಕ ಭಾಷೆಯಲ್ಲಿ, ಸಾಮಾನ್ಯ ಜನರೂ ಅರ್ಥ ಮಾಡಿಕೊಳ್ಳುವ ರೀತಿಯಲ್ಲಿ ವ್ಯಾಖ್ಯಾನ ಮಾಡಿದರು. ಸತ್ಯವಾದ ಸಂಗತಿಯೆಂದರೆ, ಭಾರತದ ಮತ್ತು ಇತರ ದೇಶಗಳಲ್ಲಿರುವ ಲಕ್ಷಾಂತರ ಜನ ವೇದಾಂತದ ಮೂಲಭೂತ ಪರಿಕಲ್ಪನೆಗಳನ್ನು ಸ್ವಲ್ಪವಾದರೂ ಅರ್ಥಮಾಡಿಕೊಂಡಿರುವುದು ಸ್ವಾಮಿ ವಿವೇಕಾನಂದರ ಪ್ರವಚನಗಳ ಅಧ್ಯಯನದ ಮೂಲಕವೇ ಎಂದು ಧಾರಾಳವಾಗಿ ಹೇಳಬಹುದು.

೩. ಸ್ವಾಮಿ ವಿವೇಕಾನಂದರು ವೇದಾಂತದ ಸಾಂಪ್ರದಾಯಿಕ ವ್ಯಾಖ್ಯಾನಗಳನ್ನು ಸುಮ್ಮನೆ ಅನುಸರಿಸಲಿಲ್ಲ; ವೇದಾಂತದ ಅರಿವು ಮತ್ತು ನಿತ್ಯಜೀವನದಲ್ಲಿ ಅದರ ಅನುಷ್ಠಾನದ ಕ್ಷೇತ್ರಗಳಲ್ಲಿ ಅವರು ತಮ್ಮದೇ ಆದ ಸ್ವಂತ ಕೊಡುಗೆಗಳನ್ನೂ ನೀಡಿದ್ದಾರೆ. ಸಾಂಪ್ರದಾಯಿಕ ಅದ್ವೈತಿಗಳು ಬ್ರಹ್ಮತತ್ತ್ವದ ಅತೀಂದ್ರಿಯ ಆಯಾಮಕ್ಕೆ ಹೆಚ್ಚು ಒತ್ತು ಕೊಡುತ್ತಾರೆ; ಆದರೆ ಸ್ವಾಮೀಜಿ ಬ್ರಹ್ಮತತ್ತ್ವದ ಸರ್ವವ್ಯಾಪಿ ಆಯಾಮಕ್ಕೆ ಹೆಚ್ಚು ಮಹತ್ವವನ್ನು ನೀಡಿದರು. ಎರಡನೆಯದಾಗಿ, ಸ್ವಾಮೀಜಿ ಮಾಯೆಯನ್ನು 'ಯಥಾಸ್ಥಿತಿಯ ಹೇಳಿಕೆ' (Statement of facts) ಎಂದು ಕರೆದಿದ್ದಾರೆ. ಆ ಮೂಲಕ ಸ್ವಾಮೀಜಿ, ಶ್ರೀಶಂಕರರ ಅನಂತರ ಬಂದ ಅದ್ವೈತಿಗಳು ಮಾಯೆಗೆ ನೀಡಿದ್ದ ಅನವಶ್ಯಕ ಮಹತ್ವವನ್ನು ಎಷ್ಟೋ ಕಡಮೆ ಮಾಡಿದ್ದಾರೆ. ಮೂರನೆಯದಾಗಿ, 'ನಕಾರಾತ್ಮಕ ತತ್ತ್ವ' ವೆಂದು ಪರಿಗಣಿಸಲಾಗಿದ್ದ ಅದ್ವೈತವನ್ನು ಸ್ವಾಮೀಜಿ, 'ಸಕಾರಾತ್ಮಕ ತತ್ತ್ವ'ವನ್ನಾಗಿ, ಅಂದರೆ ಪರಬ್ರಹ್ಮನ ಮಹಾನತೆ ಮತ್ತು ಅಸೀಮ ಶಕ್ತಿಯನ್ನು ಪ್ರತಿಪಾದಿಸುವ ತತ್ತ್ವವನ್ನಾಗಿ ಮಾರ್ಪಡಿಸಿದ್ದಾರೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಎರಡನೆಯ ಸಹಸ್ರಮಾನದ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಶ್ರೀ ಶಂಕರಾಚಾರ್ಯರು ಅದ್ವೈತವನ್ನು ಪುನಃಸ್ಥಾಪಿಸಿದರು. ಅದೇ ರೀತಿ, ಮೂರನೆಯ ಸಹಸ್ರಮಾನದ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಸ್ವಾಮಿ ವಿವೇಕಾನಂದರು ಅದ್ವೈತವನ್ನು ಮತ್ತೊಮ್ಮೆ ಪುನಃಸ್ಥಾಪಿಸಿದರು.

**೬. ಆಧ್ಯಾತ್ಮಿಕ ಸಾಧನವಾಗಿ 'ಯೋಗ' ವನ್ನು ಪ್ರಚುರಪಡಿಸಿದ್ದು:** ಇಂದಿನ ದಿನಗಳಲ್ಲಿ ಹಿಂದೂಧರ್ಮವು ಬೋಧಿಸುವ ಯೋಗಮಾರ್ಗಕ್ಕೆ ಎಲ್ಲೆಡೆ ಮಹತ್ವವನ್ನು ನೀಡಲಾಗುತ್ತಿದೆ. ಇದಕ್ಕೆ ಬಹುತೇಕ ಕಾರಣ, ಸ್ವಾಮಿ ವಿವೇಕಾನಂದರ ಪ್ರಭಾವವೇ ಎಂದರೆ ತಪ್ಪಾಗಲಾರದು. ಸ್ವಾಮೀಜಿಯವರು ಈ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳನ್ನು ಹೀಗೆ ಪಟ್ಟಿಮಾಡಬಹುದು:

**ಅ.** ಸಾಮಾನ್ಯವಾಗಿ ಯೋಗಾಸನಗಳನ್ನು ಅಥವಾ ಅತಿಮಾನಸಿಕ ಶಕ್ತಿಗಳನ್ನೇ 'ಯೋಗ' ಎಂದು ಭಾವಿಸುವ ಕಾಲವಿತ್ತು. ಸ್ವಾಮಿ ವಿವೇಕಾನಂದರು ಈ ತಪ್ಪು ಕಲ್ಪನೆಯನ್ನು ಹೋಗಲಾಡಿಸಿದರು; ಯೋಗವೆಂದರೆ ಉನ್ನತ ಮಟ್ಟದ ಆಧ್ಯಾತ್ಮಿಕ ಸಾಧನೆಯೆಂದು ತೋರಿಸಿಕೊಟ್ಟರು.

**ಆ.** ಎರಡನೆಯದಾಗಿ, ವೇದಾಂತದ ಅನುಷ್ಠಾನ ಅಂಗವನ್ನಾಗಿ 'ಯೋಗ'ವನ್ನು ಸ್ವಾಮೀಜಿ ರೂಪಿಸಿದರು. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ವೇದಾಂತ ಮತ್ತು ಯೋಗವನ್ನು ಸಮನ್ವಯಗೊಳಿಸುವ ಪ್ರಪ್ರಥಮ ಪ್ರಯತ್ನವನ್ನು ಮಾಡಿದನು. ಆದರೆ ಮುಂದಿನ ಶತಮಾನಗಳಲ್ಲಿ, ವೇದಾಂತದ ಪ್ರಾಬಲ್ಯದಿಂದಾಗಿ, ಯೋಗವನ್ನು ಕಡೆಗಣಿಸಲಾಗಿತ್ತು. ಈ ಆಧುನಿಕ ಯುಗದಲ್ಲಿ ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರು ವೇದಾಂತ ಮತ್ತು ಯೋಗಗಳನ್ನು ಸಂಯೋಜಿಸುವುದರ ಮೂಲಕ, ಈ ಸಮನ್ವಯವನ್ನು ಮತ್ತೊಮ್ಮೆ ಪುನರುಜ್ಜೀವನಗೊಳಿಸಿದರು.

**ಇ.** ಸ್ವಾಮೀಜಿ ನಾಲ್ಕು ಯೋಗಗಳಲ್ಲಿ ಪ್ರತಿಯೊಂದರಲ್ಲಿಯೂ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ. ಈ ಮಹಾನ್ ಕೊಡುಗೆಗಳ ವಿಚಾರವಾಗಿ ಇನ್ನೂ ಸರಿಯಾದ ಅಧ್ಯಯನ ನಡೆದಿಲ್ಲ; ಅವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಇನ್ನೂ ಆಗಿಲ್ಲ.

**ಈ.** ಸ್ವಾಮೀಜಿ ಹಿಂದೂ ಆಧ್ಯಾತ್ಮಿಕ ಕ್ಷೇತ್ರಕ್ಕೆ ನೀಡಿದ ಇನ್ನೊಂದು ಮಹತ್ವದ ಕೊಡುಗೆಯೆಂದರೆ, 'ಯೋಗಸಮನ್ವಯ.' ಯೋಗಸಮನ್ವಯವನ್ನು ಮಾನವ ವ್ಯಕ್ತಿತ್ವದ ವಿವಿಧ ಆಯಾಮಗಳ ಬೆಳವಣಿಗೆ ಮತ್ತು ಸರ್ವಾಂಗೀಣ ವ್ಯಕ್ತಿತ್ವದ ಅಭಿವೃದ್ಧಿಯೆಂಬಂತೆ ಪ್ರಸ್ತುತಪಡಿಸಿದ ಕೀರ್ತಿ ಸ್ವಾಮಿ ವಿವೇಕಾನಂದರಿಗೆ ಸೇರುತ್ತದೆ.

**೭. ಅನುಷ್ಠಾನ ವೇದಾಂತ :** ವೇದಾಂತದ ತತ್ತ್ವಗಳು ಮುಕ್ತಿ ಸಾಧನೆಗಾಗಿ ಮಾತ್ರವೇ ಸಹಾಯಕಾರಿಯಲ್ಲ; ದಿನನಿತ್ಯದ ಜೀವನಕ್ಕೆ ಅಳವಡಿಸಿಕೊಂಡರೆ ಪ್ರತಿದಿನ ನಾವು ಎದುರಿಸುತ್ತಿರುವ ಸಮಸ್ಯೆಗಳಿಗೂ ಪರಿಹಾರವಾಗಬಲ್ಲವು ಎಂದು ಸ್ವಾಮೀಜಿ ತೋರಿಸಿಕೊಟ್ಟರು. ಹಿಂದೆಯೇ ಹೇಳಿದ ಹಾಗೆ, ಸಾಂಪ್ರದಾಯಿಕ ಅದ್ವೈತಿಗಳು ಬ್ರಹ್ಮತತ್ತ್ವದ ಅತೀಂದ್ರಿಯ ಆಯಾಮಕ್ಕೆ ಹೆಚ್ಚು ಮಹತ್ವವನ್ನು ಕೊಡುತ್ತಾರೆ. ಆದರೆ ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರು ಬ್ರಹ್ಮತತ್ತ್ವದ ಸರ್ವವ್ಯಾಪಿ ಆಯಾಮಕ್ಕೆ ಹೆಚ್ಚು ಮಹತ್ವವನ್ನು ನೀಡುತ್ತಾರೆ. ಬ್ರಹ್ಮತತ್ತ್ವದ ಸರ್ವವ್ಯಾಪಿ ಆಯಾಮವು ಎರಡು ಅಂಶಗಳ ಮೇಲೆ ಆಧರಿಸಿದೆ : ೧. ಮಾನವ ನೈಜಸ್ವರೂಪವು ದೇಹವೂ ಅಲ್ಲ, ಮನಸ್ಸೂ ಅಲ್ಲ; ಅದಕ್ಕೆ ಬದಲಾಗಿ ಪ್ರತ್ಯಗಾತ್ಮ ಅಥವಾ ಆ ಎರಡರ ಹಿನ್ನೆಲೆಯಲ್ಲಿ ಭಾಸವಾಗುವ ಚೈತನ್ಯ. ೨. ಪರಮಾತ್ಮನು ಅಂತರ್ಯಾಮಿಯ ರೂಪದಲ್ಲಿ ಎಲ್ಲರಲ್ಲಿಯೂ ನೆಲೆಸಿರುತ್ತಾನೆ. ಈ ಎರಡು ತಾತ್ತ್ವಿಕ ಅಂಶಗಳನ್ನು ನಿತ್ಯಜೀವನಕ್ಕೆ ಅಳವಡಿಸಿದಾಗ, ನಾವು ನಮ್ಮ ಜೀವನದ ಬಗ್ಗೆ ತಳೆಯುವ ದೃಷ್ಟಿಯೇ ಪರಿವರ್ತನೆ ಹೊಂದುತ್ತದೆ ಹಾಗೂ ಅವು ಈ ಕೆಳಗಿನ ಕ್ಷೇತ್ರಗಳಲ್ಲಿ ನಮಗೆ ಬಹು ಉಪಕಾರಿಯಾಗಿ ಪರಿಣಮಿಸುತ್ತವೆ:

**ಅ. ನೈತಿಕ ಜೀವನ :** ಸಾಂಪ್ರದಾಯಿಕ ನೈತಿಕತೆಯು ದೇವರ ಬಗೆಗಿನ ಭಯ ಅಥವಾ ಕರ್ಮಫಲ ಮುಂತಾದ ಅಂಶಗಳ ಮೇಲೆ ಆಧರಿಸಿದೆ. ಆದರೆ ಒಬ್ಬ ವ್ಯಕ್ತಿ ತನ್ನ ನಿಜಸ್ವರೂಪವನ್ನು ಆತ್ಮವೆಂದು ಪರಿಗಣಿಸಿದರೆ, ಆಗ ನೈತಿಕತೆಯು ಜೀವನದ ಸಹಜಮಾರ್ಗವಾಗಿ ಪರಿಣಮಿಸುವುದು; ಆಗ ಆ ವ್ಯಕ್ತಿ ತನ್ನ ದೇಹ ಅಥವಾ ಮನಸ್ಸನ್ನು ದುರುಪಯೋಗಗೊಳಿಸಿಕೊಳ್ಳುವುದಿಲ್ಲ.

**ಆ. ಜೀವನದ ಸಮಸ್ಯೆಗಳನ್ನು ಎದುರಿಸುವ ಆತ್ಮಶ್ರದ್ಧೆ ಮತ್ತು ಧೈರ್ಯ :** ತನ್ನ ಆತ್ಮದಲ್ಲಿ ದಿವ್ಯತೆಯ ಕೇಂದ್ರವಿದೆ ಎಂದು ಒಬ್ಬ ವ್ಯಕ್ತಿ ಅರಿತುಕೊಂಡರೆ, ಸಹಜವಾಗಿಯೇ ಆವನು ತನ್ನಲ್ಲಿ ಶ್ರದ್ಧೆಯನ್ನು ಬೆಳೆಸಿಕೊಳ್ಳುತ್ತಾನೆ; ತನ್ನ ಅಂತರಂಗದಲ್ಲಿ ಧೈರ್ಯವನ್ನು ತಳೆಯುತ್ತಾನೆ. ಇದು ಜೀವನದ ಸಮಸ್ಯೆಗಳನ್ನು ಎದುರಿಸಲು ಅವನಿಗೆ ಸಹಾಯ ಮಾಡುತ್ತದೆ.

**ಇ. ಪ್ರೇಮ ಮತ್ತು ಸೇವೆ :** ಎಲ್ಲ ಜೀವಿಗಳಲ್ಲಿಯೂ ಪರಮಾತ್ಮನು ಅಂತರ್ಯಾಮಿಯಾಗಿ ನೆಲೆಸುತ್ತಾನೆ ಎಂದು ತಿಳಿದುಕೊಂಡರೆ, ಇತರ ಜನಗಳ ಬಗ್ಗೆ ನಮ್ಮ ಮನೋಭಾವವು ಪ್ರೀತಿ ಮತ್ತು ಸೇವಾ ಮನೋಭಾವವಾಗಿ ಸಹಜವಾಗಿಯೇ ಮಾರ್ಪಾಡು ಹೊಂದುತ್ತದೆ. ಈ ಭಾವನೆಯು ಹಿಂದೂ ಶಾಸ್ತ್ರಗಳಲ್ಲಿ ಸೂಚಿತವಾಗಿದೆ, ಆದರೆ ಸಾಮಾಜಿಕ ಜೀವನದಲ್ಲಿ ಅದನ್ನು ಅನುಷ್ಠಾನಕ್ಕೆ ತಂದಿರುವುದು ಕಡಮೆ. ಸ್ವಾಮಿ ವಿವೇಕಾನಂದರು ಈ ಭಾವನೆಯನ್ನು ಹೊರ ತೆಗೆದು, ಸಾಮಾಜಿಕ ಜೀವನಕ್ಕೆ, ಅದರಲ್ಲೂ ಬಡಜನರು, ದೀನ ದಲಿತರು, ರೋಗಿಗಳು ಮತ್ತು ಉಪೇಕ್ಷಿತರ ಸೇವೆ ಮಾಡುವ ಪವಿತ್ರ ಕೈಂಕರ್ಯಕ್ಕೆ, ಅಳವಡಿಸಿ ತೋರಿಸಿದರು.

**೮. ಹಿಂದೂ ಸಂನ್ಯಾಸಿ ಸಂಪ್ರದಾಯ ವ್ಯವಸ್ಥೆಯ (Hindu Monasticism) ಪುನರುಜ್ಜೀವನ, ಪುನರ್ನವೀಕರಣ ಮತ್ತು ಪುನರ್ರಚನೆ:** ಭಾರತವನ್ನು ಬಿಟ್ಟು ಮಿಕ್ಕೆಲ್ಲೆಡೆಗಳಲ್ಲಿಯೂ ಸಂನ್ಯಾಸಿ ಸಂಪ್ರದಾಯ ವ್ಯವಸ್ಥೆ ಕಳೆಗುಂದುತ್ತಿದೆ. ಪಾಶ್ಚಾತ್ಯ ಜಗತ್ತಿನಲ್ಲಿ ಕ್ರೈಸ್ತ ಸಂನ್ಯಾಸಿ ಸಂಪ್ರದಾಯ ವ್ಯವಸ್ಥೆಯು, ಆಧುನಿಕ ಯುಗದ ಸವಾಲುಗಳನ್ನು ಎದುರಿಸಲಾಗದೆ ಕುಸಿದುಹೋಗುತ್ತಿದೆ. ಭಾರತದಲ್ಲಿಯೂ ಕೂಡ, ಸಂನ್ಯಾಸಿ ಸಂಪ್ರದಾಯ ವ್ಯವಸ್ಥೆಯು ಅತ್ಯಂತ ಸಂಕೀರ್ಣ ಘಟ್ಟವನ್ನು ಹಾದುಹೋಗುತ್ತಿದೆ. ಸ್ವಾಮಿ ವಿವೇಕಾನಂದರು ಸಂನ್ಯಾಸಿ ಸಂಪ್ರದಾಯ ವ್ಯವಸ್ಥೆಗೆ ನೂತನ ದಿಶೆಯನ್ನು ನೀಡಿದರು; ಆಧ್ಯಾತ್ಮಿಕ ಜೀವನದ ಶಾಶ್ವತ ನಿಯಮ ಗಳನ್ನು ತೀವ್ರವಾಗಿ ಪರಿವರ್ತನೆ ಹೊಂದುತ್ತಿರುವ ಆಧುನಿಕ ಸಮಾಜದಲ್ಲಿ ಅಳವಡಿಸಿಕೊಳ್ಳುವ ವಿಧಾನವನ್ನು ಬೋಧಿಸಿದರು. ಅವರ ಈ ಪ್ರಯತ್ನಗಳನ್ನು ಮೇಲೆ ವಿವರಿಸಿದ ಇಂದಿನ ಕಠಿಣ ಸಂದರ್ಭದ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು.

ನಾವು ಹಿಂದೂ ಸಂನ್ಯಾಸಿ ಪದ್ಧತಿಯ ಇತಿಹಾಸವನ್ನು ಅಧ್ಯಯನ ಮಾಡಿದರೆ, ಹಿಂದೂ ಸಂನ್ಯಾಸಿ ಜೀವನದಲ್ಲಿ ಮಹತ್ವವಾದ ಪಾತ್ರವನ್ನು ವಹಿಸಿದ ಮೂವರು ಸ್ಮರಣೀಯ ಮಹಾನ್ ವ್ಯಕ್ತಿಗಳು ಕಾಣಬರುತ್ತಾರೆ. ಎಂಟನೆಯ ಶತಮಾನದ ಶ್ರೀಶಂಕರಾಚಾರ್ಯರು ಅವರಲ್ಲಿ ಮೊದಲಿಗರು. ಅವರು ಹಿಂದೂ ಸಂನ್ಯಾಸಿಗಳನ್ನು ಹತ್ತು ಸಂಪ್ರದಾಯಗಳಾಗಿ (ದಶನಾಮಿ) ವಿಂಗಡಿಸಿದರು. ಅದಲ್ಲದೆ, ಸಾಮಾಜಿಕ ಬಾಧ್ಯತೆಗಳಿಂದ ಸಂನ್ಯಾಸ ಜೀವನವನ್ನು ಮುಕ್ತಗೊಳಿಸಿದರು. ಶ್ರೀಶಂಕರರ ಇನ್ನೊಂದು ಪ್ರಮುಖ ಕಾರ್ಯವೆಂದರೆ, ಸಂನ್ಯಾಸ ಜೀವನವನ್ನು ಅಧ್ಯಯನ ಮತ್ತು ವಿದ್ವತ್ತುಗಳ ಜೀವನವನ್ನಾಗಿ ರೂಪಿಸಿದ್ದು. ಇದರ ಫಲವಾಗಿ, ಶ್ರೀಶಂಕರರ ಕಾಲದಿಂದ ಹಿಡಿದು ಇಲ್ಲಿಯವರೆಗೂ, ವಿಶೇಷವಾಗಿ ಉತ್ತರ ಭಾರತದಲ್ಲಿ, ಸಂನ್ಯಾಸಿಗಳೇ ಅದ್ವೈತ ವೇದಾಂತದ ಪ್ರಮುಖ ಬೋಧಕರಾಗಿ ಮತ್ತು ಪ್ರಸಾರಕರಾಗಿ ಕಂಗೊಳಿಸುತ್ತಿದ್ದಾರೆ.

ಎರಡನೆಯ ಮಹಾನ್ ವ್ಯಕ್ತಿಯೆಂದರೆ, ೧೬ನೆಯ ಶತಮಾನದಲ್ಲಿ ಜೀವಿಸಿದ್ದ ಮಧುಸೂದನ ಸರಸ್ವತಿ. ಅವರು ಮಾಡಿದ ಘನ ಕಾರ್ಯವೆಂದರೆ ಸಂನ್ಯಾಸ ಜೀವನದ ಮಹಾ ದ್ವಾರವನ್ನು ಎಲ್ಲ ಜಾತಿ ಪಂಗಡಗಳಿಗೆ ಸೇರಿದ ಜನರಿಗೂ ಮುಕ್ತವಾಗಿ ತೆರೆದಿಟ್ಟದ್ದು. ಇದರಿಂದಾಗಿ ಬಹು ಸಂಖ್ಯೆಯ ಜನರು ಹಿಂದೂ ಸಂನ್ಯಾಸಿ ಸಂಪ್ರದಾಯವನ್ನು ಅಪ್ಪಿಕೊಂಡರು. ಹಾಗೆಯೇ, ಆಖಾಡಾ ಎಂಬ ಹೆಸರಿನ ದೊಡ್ಡ ದೊಡ್ಡ ಮಠಗಳೂ ಹುಟ್ಟಿಕೊಂಡವು.

ಹಿಂದೂ ಸಂನ್ಯಾಸಿ ಸಂಪ್ರದಾಯದ ಇತಿಹಾಸದಲ್ಲಿ ಕಾಣ ಬರುವ ಮೂರನೆಯ ಮಹಾನ್ ವ್ಯಕ್ತಿಯೆಂದರೆ, ೧೯ನೆಯ ಶತಮಾನದ ಅಂತ್ಯಭಾಗದಲ್ಲಿ ಜೀವಿಸಿದ್ದ ಸ್ವಾಮಿ ವಿವೇಕಾನಂದರು. ತಮ್ಮ ಗುರುಗಳಾದ ಶ್ರೀರಾಮಕೃಷ್ಣರ ನಿರ್ದಿಷ್ಟ ಆಣತಿಯ ಮೇರೆಗೆ, ಸ್ವಾಮಿ ವಿವೇಕಾನಂದರು 'ರಾಮಕೃಷ್ಣ ಮಠ' ಎಂಬ ವಿನೂತನ ಸಂನ್ಯಾಸಿ ಸಂಪ್ರದಾಯವನ್ನು ಹುಟ್ಟುಹಾಕಿದರು. ಈ ಸಂಪ್ರದಾಯವು ತೀವ್ರವಾಗಿ ಪರಿವರ್ತನೆ ಹೊಂದುತ್ತಿರುವ ಭಾರತೀಯ ಸಮಾಜ ಮತ್ತು ಹಿಂದೂ ಸಂಸ್ಕೃತಿಯ ಹಾಗೂ ಭಾರತವು ಜಾಗತಿಕ ವ್ಯವಹಾರಗಳಲ್ಲಿ ವಹಿಸಬೇಕಾದ ನೂತನ ಪಾತ್ರದ ಆವಶ್ಯಕತೆಗಳನ್ನು ಪೂರೈಸುವ ರೀತಿಯಲ್ಲಿ ರೂಪು ಗೊಂಡಿದೆ. ರಾಮಕೃಷ್ಣ ಮಠದ ಸಂಸ್ಥಾಪನೆಯಿಂದಾಗಿ ಹಿಂದೂ ಸಂನ್ಯಾಸಿ ಸಂಪ್ರದಾಯ ವ್ಯವಸ್ಥೆಯಲ್ಲಿ ಗಣನೀಯವಾದ ಪುನರು ಜ್ಜೀವನ ಉಂಟಾಗಿರುವುದನ್ನು ನಾವು ಗಮನಿಸಬಹುದು. ಸಂನ್ಯಾಸ ಧರ್ಮದಲ್ಲಿ ಸ್ವಾಮೀಜಿ ಪರಿಚಯಿಸಿದ ಕೆಲವು ಮುಖ್ಯ ಮಾರ್ಪಾಡುಗಳನ್ನು ನಾವು ಹೀಗೆ ಪಟ್ಟಿ ಮಾಡಬಹುದು:

**೧. ಸಾಮಾಜಿಕ ಕಲ್ಯಾಣಕ್ಕಾಗಿ ಸಂನ್ಯಾಸಿಗಳನ್ನು ಬಳಸಿ ಕೊಂಡದ್ದು ಮೊದಲನೆಯ ಅಂಶ.** ಸಂನ್ಯಾಸಿಗಳು ಸ್ವಾರ್ಥ ಆಶೆಗಳನ್ನು ಮತ್ತು ಪ್ರಾಪಂಚಿಕ ಆಸಕ್ತಿಯನ್ನು ತ್ಯಜಿಸಿರುತ್ತಾರೆ. ಇದರಿಂದಾಗಿ ಅವರಲ್ಲಿ ಸುಪ್ತಶಕ್ತಿಯೊಂದು ಮನೆಮಾಡಿರುತ್ತದೆ. ಅದನ್ನು ಉನ್ನತ ದಿಕ್ಕಿನತ್ತ ಹರಿಸಿದಾಗ, ಅದರಿಂದ ಬಹಳ ಬೇಗನೆ ಸಾಮಾಜಿಕ ಅಭ್ಯುದಯ ಮತ್ತು ಪ್ರಗತಿಗಳು ಉಂಟಾಗಲು ಸಾಧ್ಯ. ಸ್ವಾಮೀಜಿಯವರ ಈ ಕಾರ್ಯಯೋಜನೆಯಲ್ಲಿ ಉಂಟಾಗ ಬಹುದಾದ ಮುಖ್ಯ ತಡೆಯೆಂದರೆ, ಸಂನ್ಯಾಸಿಗಳಿಗೆ ಯಾವುದೇ ಸಾಮಾಜಿಕ ಜವಾಬ್ದಾರಿ ಇಲ್ಲ ಮತ್ತು ಕರ್ಮಯೋಗದ ಕಟ್ಟು ಪಾಡಿಗಿಂತ ಅವರು ಮೇಲ್ಮಟ್ಟದಲ್ಲಿದ್ದಾರೆ ಎನ್ನುವ ಸಾಂಪ್ರ ದಾಯಿಕ ನಂಬಿಕೆ. ಸ್ವಾಮೀಜಿಯವರು ಈ ಅಡೆತಡೆಯನ್ನು ತಮ್ಮ ಗುರು ಶ್ರೀರಾಮಕೃಷ್ಣರು ಪ್ರತಿಪಾದಿಸಿದ ನೂತನ ಸೇವಾತತ್ತ್ವದ ಅನುಸರಣೆಯ ಮೂಲಕ ನಿವಾರಿಸಿಕೊಂಡರು. ಶ್ರೀರಾಮಕೃಷ್ಣರು